(ರೈಟ್ಸ್)ಸಂಸ್ಥೆಗೆ ಸರ್ಕಾರದ ಮೂಲ ಸೌಲ್ಯಭ್ಯ ಅಭಿವೃದ್ಧಿ ಇಲಾಖೆಯಿಂದ ವಹಿಸಲಾಗಿದೆ. ಈ ಬಗ್ಗೆ ಮೆ.ರೈಟ್ಸ್‌ನವರು ಕೋರಿದ್ದು, ತಾಂತ್ರಿಕ ವಿವರಗಳನ್ನು ಲೋಕೋಪಯೋಗಿ ಇಲಾಖೆಯ ಶಿವಮೊಗ್ಗ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ನೇರವಾಗಿ ಮೆ.ರೈಟ್ಸ್ ರವರಿಗೆ ಸಲ್ಲಿಸಲಾಗಿದೆ. ಈ ಕಾಮಗಾರಿಯ ವಿವರವಾದ ನಕ್ಷೆ ಮತ್ತು ಇತರೆ ವಿವರಗಳನ್ನು ಮೆ.ರೈಟ್ಸ್ ಸಂಸ್ಥೆಯವರು ತಯಾರಿಸಿದ್ದು ಸಂಬಂಧಪಟ್ಟವರ ಅನುಮೋದನೆಗಾಗಿ ಕಳುಹಿಸಿದೆ.

ನಿವೃತ್ತಿಯಾದ ನೌಕರರ ಪುನರ್ ನೇಮಕ ತಡೆಗಟ್ಟುವುದು

162 (1553) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಿವೃತ್ತಿಯಾದ ನೌಕರರನ್ನು ಪುನರ್ ನೇಮಕ ಮಾಡಬಾರದೆಂಬ ನಿಯಮ ರಾಜ್ಯದಲ್ಲಿ ಜಾರಿಯಲ್ಲಿದೆಯೇ?

ಆ. ಈ ನಿಯಮ ಇರುವುದೇ ಆದಲ್ಲಿ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಲ್ಲಿ ಹೆಚ್ಚುವರಿ ನಿರ್ದೇಶಕರಾಗಿ ಸೇವಾ ನಿವೃತ್ತರಾದ ಅಧಿಕಾರಿಗೆ ಪುನರ್ ನೇಮಕ ಮಾಡಿರುವುದು ನಿಜವೇ;

ಇ. ಹಾಗಿದ್ದಲ್ಲಿ, ಈ ಪುನರ್ ನೇಮಕ ಮಾಡಲು ಕಾರಣರಾದವರು ಯಾರು ಮತ್ತು ಅವರ ಮೇಲೆ ಜರುಗಿಸುವ ಕ್ರಮವೇನು; ಅಥವಾ ಕ್ರಮ ಜರುಗಿಸದೇ ಇರುವುದಕ್ಕೆ ಕಾರಣವೇನು?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ. ಇಲ್ಲ

ವಾಸ್ತವವಾಗಿ ನಿವೃತ್ತ ಸರ್ಕಾರಿ ನೌಕರರನ್ನು ನೇಮಕ ಮಾಡುವ ಅಧಿಕಾರವು ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ ನಿಯಮಗಳು, 1977ರ ನಿಯಮ 15 (1) (ಎ) ರನ್ವಯ ಸರ್ಕಾರಕ್ಕೆ ಪ್ರದತ್ತವಾಗಿದೆ.

ಆ. ಹೌದು

ಇ. ಉದ್ಭವಿಸುವುದಿಲ್ಲ.

ರಾಜ್ಯ ಸರ್ಕಾರದ ನೌಕರರಿಗೆ ವಿ.ಆರ್.ಎಸ್. ಸ್ಕೀಂನ್ನು ಪ್ರಾರಂಭಿಸುವುದು

163 (1265)- ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲ ಹೊಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬ್ಯಾಂಕುಗಳಲ್ಲಿ ಇದ್ದಂತೆ ವಿ.ಆರ್.ಎಸ್.ಸ್ಕೀಮ್‌ನ್ನು ರಾಜ್ಯ ಸರ್ಕಾರದ ನೌಕರರಿಗೆ ಸಹ ಪ್ರಾರಂಭ ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೆ;

ಆ. ಹಾಗಿದ್ದಲ್ಲಿ ಅದು ಈಗ ಯಾವ ಹಂತದಲ್ಲಿದೆ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು)

ಅ. ಇಲ್ಲ

ಆ. ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸುವ ವಿಷಯ ಇನ್ನೂ ಪರಿಶೀಲನೆಯಲ್ಲಿದೆ.